ಕರ್ನಾಟಕ ಪೋಲಿಸ್ ಟ್ರೈನಿಂಗ್ ಸ್ಕೂಲ್, ರಾಯಾಪುರ ತಾಲ್ಲೂಕು, ಹುಬ್ಬಳ್ಳಿ ಧಾರವಾಡ ಜಿಲ್ಲೆಯ ಜಮೀನಿನ ವಿಸ್ತೀರ್ಣ.

೪೯೫. ಶ್ರೀ ಗೋಪಾಲ ವಂಕಂದ ಕಾನಡೆ (ಸಿರ್ಸಿ).—ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

೧. ಹುಬ್ಬಳ್ಳಿ-ಧಾರವಾಡ ಜಿಲ್ಲಾ ರಾಯಾಪುರ ತಾಲ್ಲೂಕಿನ ಪೋಲೀಸ್ ತರಬೇತಿ ಶಾಲೆಗೆ ಇರುವ ಜಮೀನಿನ ವಿಸ್ತೀರ್ಣವೆಷ್ಟು ? ಇದು ಸರ್ಕಾರಿ ಜಮೀನೇ ಅಥವಾ ಖಾಸಗಿಯವರ ಜಮೀನೆ ?

೨. ಸದರಿ ಜಮೀನಿಗೆ ನೀಡಿರುವ ಮುಂಗಡದ ಹಣವೆಷ್ಟು ?

೩. ಉಳಿದ ಹಣವೆಷ್ಟು ?

೪. ಸದರಿ ಜಮೀನಿನಲ್ಲಿ ಯಾರ ಯಾರ ಹೆಸರಿಗೆ ಎಷ್ಟೆಷ್ಟು ಎಕರೆ ಜಮೀನಿರುವುದು, ಅದರ ಸಂಪೂರ್ಣ ವಿವರ ಒದಗಿಸುವುದು.

ಶ್ರೀ ಆರ್. ಎಲ್. ಜಾಲಪ್ಪ (ಗೃಹ ಮಂತ್ರಿಗಳು).—

೧. ಕರ್ನಾಟಕ ರಾಜ್ಯ ಪೋಲೀಸ್ ತರಬೇತಿ ಶಾಲೆಯು ಧಾರವಾಡ ಜಿಲ್ಲೆ ರಾಯಾಪುರದಿಂದ ಉತ್ತರ ಕನ್ನಡ ಜಿಲ್ಲೆ ಮಾಗೋಡುವಿಗೆ ಈಗಾಗಲೇ ಸ್ಥಳಾಂತರ ಗೊಂಡಿರುವುದರಿಂದ ತರಬೇತಿ ಶಾಲೆಗೆ ಈಗ ರಾಯಾಪುರದಲ್ಲಿ ಯಾವ ಜಮೀನು ಇರುವುದಿಲ್ಲ.

೨. ಉದ್ಭವಿಸುವುದಿಲ್ಲ.

೩. ಉದ್ಭವಿಸುವುದಿಲ್ಲ.

೪. ಉದ್ಭವಿಸುವುದಿಲ್ಲ.

ಕೆ.ಎಸ್.ಆರ್.ಟಿ.ಸಿ. ಅಧಿಕಾರಿಗಳ ಮೇಲೆ ಕಾರ್ಯಕ್ರಮ

೪೯೫. ಶ್ರೀ ಎಂ.ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ರಸ್ತೆ ಸಾರಿಗೆಯಲ್ಲಿನ ಡಿಪೋ ಮ್ಯಾನೇಜರ್ ಮತ್ತು ಅವರಿಗೆ ಮೇಲ್ಪಟ್ಟಿರುವ ಹಲವಾರು ಅಧಿಕಾರಿಗಳ ಮೇಲೆ ಭ್ರಷ್ಟಾಚಾರ ಮತ್ತಿತರ ಆರೋಪಣೆಗಳ ಮೇಲೆ ಶಿಸ್ತಿನ ಕ್ರಮ ತೆಗೆದು ಕೊಳ್ಳಲಾಗಿದೆಯೆ,

ಆ) ಹಾಗಿದ್ದಲ್ಲಿ ಕಳೆದ ೫ ವರ್ಷಗಳಲ್ಲಿ ಯಾವ ಯಾವ ವರ್ಗದ ಅಧಿಕಾರಿಗಳನ್ನು ಅಮಾನತ್ತಿನಲ್ಲಿ ಡಲಾಗಿದೆ.

ಇ) ಇತರ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ ವಿಚಾರಣೆ ನಡೆಸಲಾಗುತ್ತಿದೆಯೇ (ಅಧಿಕಾರಿ ಹೆಸರು ಮತ್ತು ಈ ಕ್ರಮಗಳು ಜಾರಿಗೆ ಬಂದಿರುವ ದಿನ, ಶಿಕ್ಷೆಯ ಪ್ರಮಾಣ ಇತ್ಯಾದಿ ವಿವರಗಳನ್ನು ಕೊಡಿರಿ)

ಈ) ಈ ಅಧಿಕಾರಿಗಳ ವಿಚಾರಣೆ ವಿಳಂಬವಾಗದಂತೆ ಸರ್ಕಾರದವರು ಕೈಗೊಳ್ಳುವ ಕ್ರಮಗಳೇನು?